Sl. No.	Name of the College	Year of Estt.
2.	Bangalore Medical College Bangalore - 560 002 Dr. P. Shankar Raja	1955
3.	Central College Bangalore - 560 002 Dr. Govardhan Hegde	1958
4.	Smt. V.H.D. Central Institute of Home Science Bangalore - 560 001 Prof. Indira Krishna	1961

ರಾಜ್ಯದಲ್ಲಿ ಮಲೇರಿಯಾ ರೋಗ ತಡೆಗಟ್ಟುವ ಬಗ್ಗೆ

4589 -ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಮಲೇರಿಯ ರೋಗ ಉಲ್ಬಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಯಾವ ಯಾವ ಜಿಲ್ಲೆಗಳಲ್ಲಿ ಮಲೇರಿಯ ರೋಗ ಉಲ್ಬಣಗೊಂಡಿದೆ? ರೋಗ ಉಲ್ಬಣಗೊಳ್ಳಲು ಕಾರಣವೇನು?*

ಇ) *ಮಲೇರಿಯವನ್ನು ತಡೆಗಟ್ಟುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು?*

ಈ) *ರಾಜ್ಯದಲ್ಲಿ ಮಲೇರಿಯ ರೋಗದಿಂದ ಸಾವಿಗೀಡಾದವರ ಸಂಖ್ಯೆ ಎಷ್ಟು? ಜಿಲ್ಲಾವಾರು ಮಾಹಿತಿ ಒದಗಿಸುವುದು?*

ಉ) *ಮಲೇರಿಯವನ್ನು ಶಾಶ್ವತವಾಗಿ ತಡೆಗಟ್ಟುವಲ್ಲಿ ಸರ್ಕಾರದ ಕಾರ್ಯಯೋಜನೆಗಳು ಏನು?*

ಡಾ. ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದ ಕೆಲವೆಡೆ ಮಾತ್ರ ಉಲ್ಬಣಗೊಂಡಿದೆ.

ಆ) ತುಮಕೂರು, ಚಿತ್ರದುರ್ಗ, ರಾಯಚೂರು, ಮಂಡ್ಯ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ

ಹೆಚ್ಚಿನ ಮಲೇರಿಯ ಪ್ರಕರಣಗಳು ಕಂಡು ಬರುತ್ತಿದೆ.

1. ಮಲೇರಿಯ ಹರಡಿರುವ ಪ್ರದೇಶಗಳಿಂದ ಇತರೆ ಪ್ರದೇಶಗಳಿಗೆ ವಲಸೆ ಬರುವ ಕೂಲಿಕಾರರು.
2. ಮಲೇರಿಯಾ ಪೀಡಿತ ಪ್ರದೇಶಗಳ ಅಂತರರಾಜ್ಯ ವಲಸೆಯಿಂದ.
3. ನಿರ್ಮಾಣ ಹಾಗೂ ಯೋಜನಾ ಪ್ರದೇಶಗಳ ಸುತ್ತಮುತ್ತ ರೋಗವಾಹಕ ಸೊಳ್ಳೆಗಳ ಉತ್ಪತ್ತಿ ತಾಣಗಳ ಹೆಚ್ಚಳ
4. ಮಲೇರಿಯ ಪರಾವಲಂಬಿಗಳು ಹಲವೆಡೆ ಕ್ಲೋರೊಕ್ವಿನ್ ಗುಳಿಗೆಗಳಿಗೆ ಪ್ರತಿರೋಧ ವ್ಯಕ್ತಪಡಿಸುತ್ತಿರುವುದು.
5. ರೋಗವಾಹಕ ಸೊಳ್ಳೆಗಳು ಡಿ.ಡಿ.ಟಿ. ಕೀಟನಾಶಕಕ್ಕೆ ಪ್ರತಿರೋಧ ವ್ಯಕ್ತಪಡಿಸುತ್ತಿರುವುದು.
6. ಕೀಟನಾಶಕಗಳ ಸಿಂಪಡಣೆಗೆ ಜನರ ಅಸಹಕಾರ.

ಇ) ರಾಜ್ಯದಲ್ಲಿ ಮಲೇರಿಯ ರೋಗವನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಅನುಷ್ಠಾನಗೊಳಿಸುತ್ತದೆ.

1. ಆರೋಗ್ಯ ಕಾರ್ಯಕರ್ತರಿಂದ ಪ್ರತಿ ಹದಿನೈದು ದಿನಕ್ಕೊಮ್ಮೆ ಗ್ರಾಮಾಂತರ ಪ್ರದೇಶಗಳಲ್ಲಿ ಮನೆ ಮನೆಗೆ ಭೇಟಿ ನೀಡಿ ಜ್ವರ ಸಮೀಕ್ಷೆ ನಡೆಸಿ, ರಕ್ತಲೇಪನ ಸಂಗ್ರಹಿಸಲಾಗುತ್ತಿದೆ.
2. ಮಲೇರಿಯ ಎಂದು ಖಚಿತಪಟ್ಟ ಎಲ್ಲಾ ಪ್ರಕರಣಗಳಿಗೆ ತೀವ್ರ ಚಿಕಿತ್ಸೆ ನೀಡಲಾಗುತ್ತಿದೆ.
3. ಸಮಸ್ಯಾತ್ಮಕ ಸ್ಥಳಗಳಲ್ಲಿ ಪ್ರಯೋಗಾಲಯಗಳನ್ನು ತೆರೆಯಲಾಗಿದೆ.
4. ಗುತ್ತಿಗೆ ಆಧಾರದ ಮೇಲೆ ನೇಮಿಸಲಾದ 878 ಕಿರಿಯ ಪ್ರಯೋಗಶಾಲಾ ತಂತ್ರಜ್ಞರನ್ನು ಸಮಸ್ಯಾತ್ಮಕ ಪ್ರದೇಶಗಳಲ್ಲಿ ಪ್ರಯೋಗಾಲಯದ ಕೆಲಸ ಕಾರ್ಯಗಳನ್ನು ಬಲಪಡಿಸಲು ನಿಯೋಜಿಸಲಾಗಿದೆ.
5. ರೋಗವಾಹಕ ಸೊಳ್ಳೆಗಳ ನಿಯಂತ್ರಣಕ್ಕಾಗಿ ನಿಯತಕಾಲಿಕ ಕೀಟನಾಶಕ ಸಿಂಪಡಣೆ ಕೈಗೊಳ್ಳಲಾಗುತ್ತಿದೆ.
6. 1997ನೇ ಇಸವಿಯಿಂದ ಪ್ರತಿ ವರ್ಷ ಜೂನ್ ತಿಂಗಳಲ್ಲಿ ಮಲೇರಿಯ ಮಾಸಾಚರಣೆಯನ್ನು ಸತತವಾಗಿ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಜನ ಸಮುದಾಯಕ್ಕೆ ಮಲೇರಿಯ ರೋಗ ತಡೆಗಟ್ಟುವ ವಿಧಿವಿಧಾನಗಳನ್ನು ಹಾಗೂ ಇದರಲ್ಲಿ ಜನಸಾಮಾನ್ಯ ಪಾತ್ರದ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.

ಈ) 2000 ದಲ್ಲಿ ಆಗಸ್ಟ್ ತಿಂಗಳ ವರೆಗೆ ರಾಜ್ಯದಲ್ಲಿ ಮಲೇರಿಯ ರೋಗದಿಂದ 3 ಜನರು ಸಾವಿಗೀಡಾಗಿರುತ್ತಾರೆ. ಇದರ ಜಿಲ್ಲಾವಾರು ವಿವರ ಇಂತಿದೆ. ಬೆಂಗಳೂರು (ನಗರ), ಬೆಳಗಾಂ,

ಬಿಜಾಪುರ, ಚಿಕ್ಕಮಗಳೂರು, ಹಾಸನ, ಮೈಸೂರು, ಶಿವಮೊಗ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ತಲಾ ಒಂದು ಸಾವು ಸಂಭವಿಸಿರುತ್ತದೆ.

ಉ) ಮಲೇರಿಯ ರೋಗವನ್ನು ಶಾಶ್ವತವಾಗಿ ತಡೆಗಟ್ಟುವುದು ಕಷ್ಟ ಸಾಧ್ಯ. ಇದನ್ನು ಮನಗಂಡು, ಭಾರತ ಸರ್ಕಾರವು "ಮಲೇರಿಯ ನಿರ್ಮೂಲನಾ ಕಾರ್ಯಕ್ರಮವನ್ನು "ಮಲೇರಿಯ ವಿರೋಧ ಕಾರ್ಯಕ್ರಮ" ವೆಂದು ಪುನರ್ನಾಮಕರಣ ಮಾಡಿ ಅದರಂತೆ ಮಲೇರಿಯ ಕ್ರಿಯಾ ಯೋಜನೆ-95 ಎಂಬ ಹೊಸ ಮಾರ್ಗದರ್ಶಿಯನ್ನು ಹೊರಡಿಸಿದ್ದು, ಇದರ ಉದ್ದೇಶವು ಮಲೇರಿಯಾ ರೋಗದಿಂದ ಸಾವು ಸಂಭವಿಸದಂತೆ ಕ್ರಮಕ್ಕೈಗೊಳ್ಳುವುದು ಹಾಗೂ ಮಲೇರಿಯ ರೋಗವನ್ನು ಹೆಚ್ಚಿನ ಆಘಾತಕ್ಕೆ ಎಡೆಗೊಡದಂತೆ ನಿಯಂತ್ರಣದಲ್ಲಿರುವುದೇ ಆಗಿದೆ.

ಬಸವನ ಬಾಗೇವಾಡಿ ಮತ ಕ್ಷೇತ್ರದಲ್ಲಿ ಕುಡಿಯುವ ನೀರಿನ ಪೈಪ್‌ಲೈನ್

4590 - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. *ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯ ಮತಕ್ಷೇತ್ರದ ಮತ್ಯಾಳ, ತೆಲಗಿ, ಮಸುತಿ, ತಲೆವಾಡ ಮನಗೊಳಿ, ಬಿಸನಾಳ 2) ಗರಸಂಗಿ-ರೊಣಿಹಾಳ್-ಮುಳನಾಡ್-ಹೊನಗನ ಹಳ್ಳಸದನಹಳ್ಳಿ ಮತ್ತು ಲೋಣಶಾಳ 3) ಮಮದಾಪುರ-ಸೇಗುಣಸಿ- ಕಾಖಂಡಕಿ 4) ಚಿಂಗಲಗತ್ತಿ-ಗುಣದಾಳ-ಬೋಳಚಕ್ಕಲಗಿ ಕಾತ್ತಾಳ, ನಂದ್ಯಾಳ ಮುಂತಾದ ಗ್ರಾಮಗಳಿಗೆ ಕೃಷ್ಣಾ ನದಿಯಿಂದ ಕುಡಿಯುವ ನೀರಿನ ಪೈಪ್ ಲೈನ್ ಹಾಕುವ ಯೋಜನೆಗಳು ಸರ್ಕಾರದ ಪರಿಶೀಲನೆಯಲ್ಲಿವೆಯೇ?*

ಆ. *ಹಾಗಿದ್ದಲ್ಲಿ, ಈ ಯೋಜನೆಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?*

ಶ್ರೀ ಎಂ. ದಿವಾಕರಬಾಬು (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ರಾಜ್ಯ ಸಚಿವರು) :

ಅ. ಬಿಜಾಪುರ ಪಟ್ಟಣದ ನೀರು ಸರಬರಾಜು ಯೋಜನೆಯಿಂದ ಗರಸಂಗಿ ಗ್ರಾಮಕ್ಕೆ ನೀರು ಪೂರೈಕೆ ಮಾಡುವ ಪ್ರಸ್ತಾವನೆಯು ತಾಂತ್ರಿಕ ಪರಿಶೀಲನೆಯಲ್ಲಿದೆ.

ಆ. ಮೇಲ್ಕಂಡ ಪ್ರಸ್ತಾವನೆಯು ತಾಂತ್ರಿಕ ಆರ್ಥಿಕವಾಗಿ ಕಾರ್ಯಸಾಧ್ಯವೆಂದು ಕಂಡು ಬಂದಲ್ಲಿ ಅನುದಾನ ಲಭ್ಯತೆಗನುಗುಣವಾಗಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಬಸವನ ಬಾಗೇವಾಡಿ ಕ್ಷೇತ್ರದಲ್ಲಿ ಕೊರತೆ ಇರುವ ಪ್ರಾಥಮಿಕ ಶಾಲಾ ಕೊಠಡಿಗಳು

4591- ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಸವನ ಬಾಗೇವಾಡಿ ಮತಕ್ಷೇತ್ರದಲ್ಲಿ ಕೊರತೆಯಿರುವ ಪ್ರಾಥಮಿಕ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು?*